## ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ **ಗೆಜೆಟೆಡ್ ಮ್ಯಾನೇಜರ್‌ಗಳಿಗೆ ಸಹಾಯಕ ನಿರ್ದೇಶಕರ** ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ದಿನಾಂಕ: 27.02.2019 ಹಾಗೂ ದಿನಾಂಕ : 15.05.2019ರ ಸಂಖ್ಯೆ : ಸಿಆಸುಇ/186/ಎಸ್‌ಆರ್‌ಎಸ್/2018ರ ಆದೇಶಗಳು.
2. ಈ ಕಛೇರಿ ದಿನಾಂಕ: 25.07.2019ರ ಸಂಖ್ಯೆ: ಕಾಶಿಇ/26/ಮ್ಯಾಜೆಪ/2019-20ರ ಅಧಿಕೃತ ಜ್ಞಾಪನದೊಂದಿಗೆ ಪ್ರಕಟಿಸಿರುವ ರಾಜ್ಯವ್ಯಾಪಿ ಉಳಿಕೆ ಮೂಲವೃಂದದ **ಗೆಜೆಟೆಡ್ ಮ್ಯಾನೇಜರ್** ಗಳ ಅಂತಿಮ ಜ್ಯೇಷ್ಠತಾ ಪಟ್ಟಿ.
3. ದಿನಾಂಕ: 20.01.2022 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು .

*****

**ಪ್ರಸ್ತಾವನೆ:**

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ **ಸಹಾಯಕ ನಿರ್ದೇಶಕರ** ಹುದ್ದೆಗಳಿಗೆ **ಗೆಜೆಟೆಡ್ ಮ್ಯಾನೇಜರ್** ಹುದ್ದೆಯಿಂದ ಶೇಕಡ 100ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ (2)ರ ಪತ್ರದೊಂದಿಗೆ ಪ್ರಕಟಿಸಿರುವ ಈ ಇಲಾಖೆಯ ರಾಜ್ಯವ್ಯಾಪಿ ಉಳಿಕೆ ಮೂಲವೃಂದದ **ಗೆಜೆಟೆಡ್ ಮ್ಯಾನೇಜರ್** ಗಳ ಅಂತಿಮ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ **ಸಹಾಯಕ ನಿರ್ದೇಶಕ** ವೃಂದದ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬೇಕಾಗಿರುತ್ತದೆ. ದಿನಾಂಕ: 20.01.2022 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿ ಇರುವ **ಸಹಾಯಕ ನಿರ್ದೇಶಕರ** ಹುದ್ದೆಗಳನ್ನು ಜ್ಯೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಅರ್ಹ **ಗೆಜೆಟೆಡ್ ಮ್ಯಾನೇಜರ್ ಗಳಿಂದ** ಮುಂಬಡ್ತಿ ಮೂಲಕ ಭರ್ತಿ ಮಾಡಲು ತೀರ್ಮಾನಿಸಲಾಯಿತು.

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ **ಗೆಜೆಟೆಡ್ ಮ್ಯಾನೇಜರ್** ಗಳ ವೃಂದದಿಂದ **ಸಹಾಯಕ ನಿರ್ದೇಶಕರ** ವೃಂದಕ್ಕೆ ಬಡ್ತಿ ಹೊಂದಲು ಅರ್ಹರಿರುವ **ಗೆಜೆಟೆಡ್ ಮ್ಯಾನೇಜರ್** ಗಳಿಗೆ **ಸಹಾಯಕ ನಿರ್ದೇಶಕರಾಗಿ** ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಕಾಶಿಇ/36/ಸ.ನಿ/ಬಡ್ತಿ/2021-22/ಬಸ್ತಾವಿ, ಬೆಂಗಳೂರು, ದಿನಾಂಕ:27.01.2022**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ **ಗೆಜೆಟೆಡ್ ಮ್ಯಾನೇಜರ್‌ಗಳಿಗೆ** ವೇತನ ಶ್ರೇಣಿ ವೇತನ ಶ್ರೇಣಿ **ರೂ.43100-1100-46400-1250-53900-1450-62600-1650-72500-1900-83900** ರಲ್ಲಿ ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ **ಸಹಾಯಕ ನಿರ್ದೇಶಕ** ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ಇರುವ ಖಾಲಿ ಹುದ್ದೆಗೆ ಎದುರಾಗಿ ಈ ಕೂಡಲೇ ಜಾರಿಗೆ ಬರುವಂತೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

**ರಾಜ್ಯವ್ಯಾಪಿ ಉಳಿಕೆ ಮೂಲ ವೃಂದ (ಆರ್.ಕೆ.)**

| ಕ್ರ.ಸಂ | ಹೆಸರು ಶ್ರೀ/ಶ್ರೀಮತಿ | ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ಕಾಲೇಜು | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ/ಕಾಲೇಜು | ಷರಾ |
|---|---|---|---|---|
| 1 | 2 | 3 | 4 | 5 |
| 1 | ಆಶಾ.ಎಂ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಯಲಹಂಕ. | ಪ್ರಾದೇಶಿಕ ಕಛೇರಿ.ಮೈಸೂರು. | **ಖಾಲಿ ಹುದ್ದೆಗೆ ಎದುರಾಗಿ** |
| 2 | ಜಗದೀಶ.ಎನ್. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | ಪ್ರಾದೇಶಿಕ ಕಛೇರಿ.ಶಿವಮೊಗ್ಗ. | **ಖಾಲಿ ಹುದ್ದೆಗೆ ಎದುರಾಗಿ** |

1. **ಸಂಬಂದಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಈ ಆದೇಶವನ್ನು ವೆಬ್‌ಸೈಟ್‌ನಿಂದ ಪಡೆದು ಬಡ್ತಿ ಹೊಂದಿದವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸತಕ್ಕದ್ದು.**

2. **ಬಡ್ತಿ ಹೊಂದಿದವರು ಸ್ಥಳನಿಯುಕ್ತಿಗೊಳಿಸಲಾದ ಕಛೇರಿಗಳಲ್ಲಿ ಈ ಆದೇಶ ಪ್ರಕಟಗೊಂಡ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಬಡ್ತಿಯನ್ನು ರದ್ದುಪಡಿಸಲಾಗುವುದು.**

3. **ಬಡ್ತಿಗೊಂಡ ನೌಕರರು ನಿಯಮಾನುಸಾರ ಸೇರುವಿಕೆ ಕಾಲ ಪಡೆಯಲು ಅರ್ಹರಿರುತ್ತಾರೆ.**

4. **ಬಡ್ತಿ ಹೊಂದಿರುವ ಗೆಜೆಟೆಡ್ ಮ್ಯಾನೇಜರ್‌ಗಳ ಪೈಕಿ ಯಾರಾದರೂ ಪ್ರಸ್ತುತ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ, ಸದರಿ ನಿಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.**

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

1) ಎಲ್ಲಾ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರುಗಳಿಗೆ/ ಮೇಲ್ಕಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಮುಂದಿನ ಅಗತ್ಯಕ್ರಮಕ್ಕಾಗಿ.
2) ಮೇಲ್ಕಂಡ ಗೆಜೆಟೆಡ್ ಮ್ಯಾನೇಜರ್‌ಗಳಿಗೆ (ಸಂಬಂಧಪಟ್ಟ ಪ್ರಾಂಶುಪಾಲರು ಮೂಲಕ)
3) ಮ್ಯಾನೇಜರ್/ಅಧೀಕ್ಷಕರು, ಸೇವಾ ವಿಭಾಗ/ವರ್ಗಾವಣೆ & ನಿಯೋಜನೆ ವಿಭಾಗ ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4) ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.

**ಪ್ರತಿಗಳು:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು/ಎಲ್ಲಾ ವಿಭಾಗಗಳ ಅಧೀಕ್ಷಕರುಗಳು – ಮಾಹಿತಿಗಾಗಿ.